ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 04.03.2023.**

**ಮುಂದುವರೆದ ಪಾಟೀ ಸವಾಲು - ವಾದಿ ಪರ ವಕೀಲರಿಂದಃ**

7) 1 ನೇ ಪ್ರತಿವಾದಿ ವೆಂಕಟಪ್ಪನ ಹೆಂಡತಿಯೇ ಸರಸ್ವತಮ್ಮ ಎಂದರೆ ನನಗೆ ಗೊತ್ತಿಲ್ಲ. ನನಗೆ ವೆಂಕಟರೆಡ್ಡಿ ಪರಿಚಯವೇ? ಎಂದರೆ ಖುದ್ದಾಗಿ ಪರಿಚಯವಿಲ್ಲ, ನಾನು ಹೇಳುತ್ತೇನೆ ಆತ ಬಂದು ಸಹಿ ಮಾಡಿದ್ದ. ನಾನು ಸದರಿ ವೆಂಕಟರೆಡ್ಡಿಯನ್ನು ನೋಡೇ ಇಲ್ಲ ಮತ್ತು ಆತ ಸಹಿಯನ್ನು ಮಾಡಿಲ್ಲ ಎಂದರೆ ಸುಳ್ಳು. 3 ನೇ ಪ್ರತಿವಾದಿ ರತ್ನಮ್ಮ ಕೂಡ 1 ನೇ ಪ್ರತಿವಾದಿಯ ಮಗಳು ಎಂದರೆ ನನಗೆ ಗೊತ್ತಿಲ್ಲ. ನಾನು 3 ನೇ ಪ್ರತಿವಾದಿಯನ್ನು ಯಾವತ್ತೂ ನೋಡಿಲ್ಲ ಎಂದರೆ ನನಗೆ ನೆನಪಿಲ್ಲ. (ಸಾಕ್ಷಿಯು ಪ್ರಶ್ನೆಗಳಿಗೆ ಉತ್ತರಿಸಲು ವಿಳಂಬ ಮಾಡುತ್ತಿದ್ದು, ಪ್ರತಿ ಪ್ರಶ್ನೆಗೆ ಕೆಳಗಡೆ ನೋಡುತ್ತಾ ನಿಂತಿದ್ದು, ವಾದಿ ಪರ ವಕೀಲರು ಮತ್ತು ನ್ಯಾಯಾಲಯ ಕೂಡ ಸಾಕ್ಷಿಯವರಿಗೆ ಪ್ರಶ್ನೆಗೆ ಕೂಡಲೇ ಉತ್ತರಿಸುವಂತೆ ತಿಳಿಸಿದ್ದು, ಸಾಕ್ಷಿಯು ತನಗೆ ಕನ್ನಡ ಅರ್ಥವಾಗುವುದಿಲ್ಲ, ಇಂಗ್ಲೀಷನಲ್ಲಿ ಹೇಳಿದರೆ ಉತ್ತರ ಹೇಳಲು ಸುಲಭವಾಗುತ್ತದೆ ಎಂದು ಹೇಳಿದ್ದಾರೆ. ಆದರೆ ದಿನಾಂಕಃ 09.01.2023 ರಂದು ಈ ಸಾಕ್ಷಿಯವರು ಪಾಟೀ ಸವಾಲಿಗೆ ಸೂಕ್ತವಾಗಿ ಮತ್ತು ಪ್ರಶ್ನೆ ಕೇಳಿದ ಕೂಡಲೇ ಉತ್ತರಿಸಿರುವುದನ್ನು ನ್ಯಾಯಾಲಯ ಗಮನಿಸಿರುತ್ತದೆ.) ನಿಡಿ-1 ರ ದೃಢೀಕೃತ ಪ್ರತಿಯನ್ನು ಉಪನೋಂದಣೆ ಕಚೇರಿಯಿಂದ ನಾನೇ ಪಡೆದು ಹಾಜರು ಮಾಡಿದ್ದೇನೆ ಎಂದರೆ ಸರಿ. ನಿಡಿ-1 ರ ಅಸಲು ಕ್ರಯಪತ್ರ ಎಲ್ಲಿದೆ ಎಂದರೆ ಅದನ್ನು ಯಾವುದೋ ಒಂದು ಕೋರ್ಟಿನಲ್ಲಿ ಹಾಜರು ಮಾಡಿದ್ದೇನೆ. ನಾನು ಯಾವ ಕಾರಣಕ್ಕೆ ಅಸಲು ಕ್ರಯಪತ್ರವನ್ನು ನಾನು ಹೇಳುತ್ತಿರುವ ಇನ್ನೊಂದು ನ್ಯಾಯಾಲಯದಲ್ಲಿ ಹಾಜರು ಮಾಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರವನ್ನು ನೋಂದಣೆ ಮಾಡುವ ಸಮಯದಲ್ಲಿ ಉಪನೋಂದಣಾಧಿಕಾರಿಗಳು ಮಾರಾಟ ಮಾಡುವವರ, ಖರೀದಿ ಮಾಡುವವರ ಮತ್ತು ಸಾಕ್ಷಿಗಳ ಗಣಕೀಕೃತ ಫೋಟೋಗಳನ್ನು ಕ್ರಯಪತ್ರದ ಮೇಲೆ ಪಡೆದುಕೊಳ್ಳುತ್ತಾರೆ ಎಂದರೆ ಸರಿ. ನಿಡಿ-1 ರ ಹಿಂಬಾಗದಲ್ಲಿರುವ ಅರವಿಂದ ಕುಮಾರ ಪಾರೇಕ್ ಎಂಬ ಹೆಸರಿನ ಮೇಲೆ ಇರುವ ಫೋಟೋ ನನ್ನದೇ

ಎಂದರೆ ಸರಿ. ಸಾಕ್ಷಿಗೆ ನಿಡಿ-1 ರ ಪುಟ 2 ರಲ್ಲಿ ಕ್ರಮಸಂಖ್ಯೆ 2 ರಲ್ಲಿ ಇರುವ ಪೋಟೋದಲ್ಲಿರುವ ವ್ಯಕ್ತಿ ಯಾರು? ಎಂದು ಕೇಳಿದ್ದು, ಸಾಕ್ಷಿಯವರು **ವೆಂಕಟಪ್ಪ ಎಂದು ಹೇಳಿದ್ದರಿಂದ ಅದನ್ನು ನಿಡಿ-1(ಎ) ಎಂದು ಗುರುತಿಸಿತು**. ನನಗೆ 4 ನೇ ಪ್ರತಿವಾದಿ ಮುನಿನಾರಾಯಣಪ್ಪ ಗೊತ್ತೇ? ಎಂದರೆ ನನಗೆ ಅವರ ನೆನಪಾಗುತ್ತಿಲ್ಲ. 4 ನೇ ಪ್ರತಿವಾದಿಯು ಚಿಕ್ಕಮುನೇಗೌಡ ಇವರ ಮಗನಾಗಿದ್ದು, ಹೊಸಕೋಟೆ ತಾಲ್ಲೂಕಿನ ಬೆಟ್ಟಹಳ್ಳಿ ಗ್ರಾಮದ ವಾಸಿ ಎಂದರೆ ನನಗೆ ನೆನಪಾಗುತ್ತಿಲ್ಲ. ನನಗೆ 4 ನೇ ಪ್ರತಿವಾದಿ ಮುನಿನಾರಾಯಣಪ್ಪ ಚೆನ್ನಾಗಿ ಪರಿಚಯಸ್ಥನೆಂದರೆ ಇಲ್ಲ, ನನಗೆ ಆತನ ನೆನಪಿಲ್ಲ, ನನಗೆ 1 ನೇ ಪ್ರತಿವಾದಿ ವೆಂಕಟಪ್ಪನ ಪರಿಚಯ ಮಾತ್ರ ಇದೆ. ವೆಂಕಟಪ್ಪನೊಂದಿಗೆ 4 ನೇ ಪ್ರತಿವಾದಿ ಕೂಡ ಉಪನೋಂದಣಿ ಕಚೇರಿಗೆ ಬಂದಿದ್ದರು ಎಂದರೆ ನನಗೆ ನೆನಪಾಗುತ್ತಿಲ್ಲ. ಸದರಿ 4 ನೇ ಪ್ರತಿವಾದಿ ಮುನಿನಾರಾಯಣಪ್ಪ ತನ್ನನ್ನು ಕ್ರಯಪತ್ರದಲ್ಲಿ ವೆಂಕಟರೆಡ್ಡಿ ಎಂದು Impersonate ಮಾಡಿದ್ದರು ಎಂದರೆ ಸರಿಯಲ್ಲ. ನಿಡಿ-1 ನ್ನು ಕೊಟ್ಟು ಇದರಲ್ಲಿ 4 ನೇ ಪ್ರತಿವಾದಿಯ ಪೋಟೋವನ್ನು ಗುರುತಿಸಲು ಆಗುತ್ತದೆಯೇ? ಎಂದರೆ ಸಾಕ್ಷಿಯು ನನಗೆ ಸರಿಯಾಗಿ ಕಾಣುವುದಿಲ್ಲ, ಕಣ್ಣಿನ ತೊಂದರೆ ಇದೆ ಎಂದು ಹೇಳಿದ್ದಾರೆ. ನಾನು ಈ ಹಿಂದೆ ನನ್ನ ಪೋಟೋ ಮತ್ತು ನಿಡಿ-1(ಎ) ಎಂದು ಗುರುತಿಸಿದ ಪೋಟೋಗಳನ್ನು ಗುರುತಿಸಿದ್ದು, 4 ನೇ ಪ್ರತಿವಾದಿಯ ಪೋಟೋ ಗುರುತಿಸಲು ಕಣ್ಣಿನ ತೊಂದರೆ ಎನ್ನುತ್ತಿದ್ದೇನೆ ಎಂದರೆ ಆ ಪೋಟೋ Blur ಆಗಿ ಇದೆ, ನಾನು ಕಾಣುತ್ತಿಲ್ಲವೆಂದು ಹೇಳಿಲ್ಲ. ಕ್ರಯಪತ್ರದ ನೋಂದಣಿಯಾದ ದಿನ ಅದರಲ್ಲಿರುವ ಎಲ್ಲರ ಪೋಟೋಗಳನ್ನು ಅದೇ ದಿನ ಏಕಕಾಲಕ್ಕೆ ಪಡೆಯಲಾಗಿತ್ತು ಎಂದರೆ ಆದರೆ ನಿಡಿ-1 ರಲ್ಲಿ ನೀವು ಕೇಳುತ್ತಿರುವ ವ್ಯಕ್ತಿಯ ಪೋಟೋ Blur ಆಗಿದೆ. ಸದರಿ ಪೋಟೋ ಸ್ಪಷ್ಟವಾಗಿ ಕಾಣುತ್ತಿದ್ದರೂ ಕೂಡ ನಿಜ ಸಂಗತಿ ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ಕಾರಣದಿಂದ ಅದು Blur ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಲ್ಲಿರುವ

ಫೋಟೋ ವೆಂಕಟರೆಡ್ಡಿ ಅವರ ಫೋಟೋ ಅಲ್ಲ, ಅದು 4 ನೇ ಪ್ರತಿವಾದಿಯ ಫೋಟೋ ಎಂದರೆ ಸರಿಯಲ್ಲ.

8) ವಾದಿಗಳು ಇದಕ್ಕೆ ಮುಂಚೆಯೇ ನನ್ನ ವಿರುದ್ಧ ಮತ್ತು ಪ್ರತಿವಾದಿ 1 ಹಾಗೂ 4 ರವರ ವಿರುದ್ಧ ಪೋರ್ಜರಿ ಕ್ರಯಪತ್ರ ಸೃಷ್ಟಿ ಮಾಡಿದ ಬಗ್ಗೆ PCR ದಾಖಲೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪೋಲಿಸರಿಗೆ ತನಿಖೆ ಮಾಡಲು ನ್ಯಾಯಾಲಯ ಶಿಫಾರಸ್ಸು ಮಾಡಿದ್ದು, ಪೋಲಿಸರು ತನಿಖೆ ಮಾಡಿ ನನ್ನ ವಿರುದ್ಧ ಕೂಡ ಆರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ನನಗೆ ನೆನಪಾಗುತ್ತಿಲ್ಲ. ನಮ್ಮ ವಿರುದ್ಧ ಸಿ.ಸಿ.ನಂ.127/2008 ದಾಖಲಾಗಿದ್ದು, ಆ ಮೊಕದ್ದಮೆಯಲ್ಲಿ ನಾನು ಜಾಮೀನು ಕೂಡ ಪಡೆದಿದ್ದೇನೆ ಎಂದರೆ ನನಗೆ ನೆನಪಾಗುತ್ತಿಲ್ಲ. ನಾನು ಈ ಹಿಂದೆ ಯಾವುದೋ ಒಂದು ನ್ಯಾಯಾಲಯದಲ್ಲಿ ಅಸಲು ಕ್ರಯಪತ್ರವನ್ನು ಹಾಜರು ಮಾಡಿದ್ದೆ ಎಂದು ಹೇಳಿದ್ದು, ನಾನು ಆ ರೀತಿ ಅಸಲು ಕ್ರಯಪತ್ರವನ್ನು ಸಿ.ಸಿ.ನಂ.127/2008 ರಲ್ಲಿ ಹಾಜರು ಮಾಡಿದ್ದೇನೆ ಎಂದರೆ ನನಗೆ ನೆನಪಿಲ್ಲ. ಪೋಲಿಸರು ಆರೋಪ ಪಟ್ಟಿಯನ್ನು ನನ್ನ ವಿರುದ್ಧ ಕೈ ಬಿಟ್ಟು ಕೇವಲ ಪ್ರತಿವಾದಿ ನಂ.1 ಹಾಗೂ 4 ರವರ ವಿರುದ್ಧ ಮಾತ್ರ ಸಲ್ಲಿಸಿದ್ದಾರೆ ಎಂದರೆ ನನಗೆ ನೆನಪಾಗುತ್ತಿಲ್ಲ. ಆ ಪ್ರಕರಣದಲ್ಲಿ ನನ್ನನ್ನು ಪೋಲಿಸರು ಒಬ್ಬ ಅಭಿಯೋಜನೆಯ ಸಾಕ್ಷಿಯಾಗಿ ತೋರಿಸಿದ್ದಾರೆ ಎಂದರೆ ನನಗೆ ನೆನಪಿಲ್ಲ. ನಾನು ಅದೇ ಮೊಕದ್ದಮೆಯಲ್ಲಿ ಅಸಲು ಕ್ರಯಪತ್ರವನ್ನು ಹಾಜರು ಮಾಡಿದ್ದೇನೆ ಎಂದರೆ ನನಗೆ ನೆನಪಾಗುತ್ತಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಆ ಕ್ರಿಮಿನಲ್ ಪ್ರಕರಣ ಈಗಲೂ ವಿಚಾರಣೆಯಾಗುತ್ತಿದೆ ಎಂದರೆ ನನಗೆ ನೆನಪಾಗುತ್ತಿಲ್ಲ. ಅದನ್ನು ವಂಚನೆ ಮಾಡಿದ ಆಪಾದನೆಯ ಮೇಲೆ ಸಲ್ಲಿಸಲಾಗಿತ್ತು ಎಂದರೆ ನನೆ ನೆನಪಿಲ್ಲ. ಪೋಲಿಸರು ಆ ಪ್ರಕರಣದಲ್ಲಿ ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

9) ವಾದ ಪತ್ರದಲ್ಲಿ 1 ಮತ್ತು 4 ನೇ ಪ್ರತಿವಾದಿಗಳ ವಿರುದ್ಧ ವಾದಿಗಳು ಮಾಡಿರುವ ಆಪಾದನೆಗಳ ಬಗ್ಗೆ ನಾನು 4 ನೇ ಪ್ರತಿವಾದಿಯ ಪಾತ್ರವೇನು ಎಂಬ ಬಗ್ಗೆ ವಿಚಾರಣೆ ಮಾಡಿದ್ದುಂಟೇ? ಎಂದರೆ ಮಾಡಿಲ್ಲ. PCR No.23/2005 ರಲ್ಲಿ ನನ್ನನ್ನು 4 ನೇ ಆರೋಪಿಯನ್ನಾಗಿ ಮಾಡಿದ್ದರು ಎಂದರೆ ನನಗೆ ನೆನಪಿಲ್ಲ. ಈ ದಾವೆಯನ್ನು ವಾದಿಗಳು ವೆಂಕಟರೆಡ್ಡಿಯನ್ನು 2 ನೇ ಪ್ರತಿವಾದಿಯನ್ನಾಗಿ ಮಾಡಿ ಸಲ್ಲಿಸಿದ್ದಾರೆ ಎಂದರೆ ನನಗೆ ಬೇರೆಯವರ ಬಗ್ಗೆ ಗೊತ್ತಿಲ್ಲ, ನನ್ನನ್ನು ಪ್ರತಿವಾದಿಯಾಗಿ ಮಾಡಿದ್ದಾರೆ ಎಂದು ಮಾತ್ರ ಗೊತ್ತು. 2 ನೇ ಪ್ರತಿವಾದಿ ಆತನ ಪ್ರತಿವಾದ ಪತ್ರದಲ್ಲಿ ಕ್ರಯಪತ್ರ ನೋಂದಣಿ ಮಾಡುವಾಗ ಆತ ಹಾಜರಿರಲಿಲ್ಲ ಮತ್ತು ಕ್ರಯಪತ್ರಕ್ಕೆ ಸಹಿ ಮಾಡಿಲ್ಲವೆಂದು ತಿಳಿಸಿದ್ದಾರೆ ಎಂದರೆ ಸುಳ್ಳು. ನಾನು 2 ನೇ ಪ್ರತಿವಾದಿ ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿದ್ದೇನೆ. 2 ನೇ ಪ್ರತಿವಾದಿ ಈ ದಾವೆಯಲ್ಲಿ ಕೌಂಟರ್ ಕ್ಲೇಮ್ ಮೂಲಕ ತನಗೂ ಪಾಲು ವಿಭಾಗ ಬರಬೇಕೆಂದು ಹೇಳಿದ್ದಾರೆ ಎಂದರೆ ನನಗೆ ಅವರ ಪ್ರತಿವಾದ ಪತ್ರದಲ್ಲಿ ಹೇಳಿದ ಸಂಗತಿಗಳು ನೆನಪಾಗುತ್ತಿಲ್ಲ. (ಸಾಕ್ಷಿಯು 2 ನೇ ಪ್ರತಿವಾದಿಯ ಪ್ರತಿವಾದ ಪತ್ರದ 6 ನೇ ಪ್ಯಾರಾವನ್ನು ಅವರಿಗೆ ಓದಿ ಹೇಳಿ 2 ನೇ ಪ್ರತಿವಾದಿಯು **1 ನೇ ಪ್ರತಿವಾದಿ ಪಾಲು ವಿಭಾಗ ನೀಡಲು ಮುಂದೆ ಬರಲಿಲ್ಲ, 4 ನೇ ಪ್ರತಿವಾದಿ ಕುಟುಂಬಕ್ಕೆ ಅಪರಿಚಿತ ವ್ಯಕ್ತಿಯಾಗಿದ್ದು ಆತನು ತಾನೇ 2 ನೇ ಪ್ರತಿವಾದಿ ಎಂದು ತಪ್ಪಾಗಿ ಪ್ರತಿನಿಧಿಸಿ 5 ನೇ ಪ್ರತಿವಾದಿಗೆ ಕ್ರಯಪತ್ರ ನೋಂದಣಿ ಮಾಡಿಕೊಟ್ಟಿರುವುದು** ನಿಜ ಎಂದು ಸೂಚಿಸಿದರೆ ಸಾಕ್ಷಿಯವರು ನನಗೆ ಇದಕ್ಕೆ ಉತ್ತರಿಸಲು ಕಾಲಾವಕಾಶ ಬೇಕು ಎಂದು ಹೇಳಿದ್ದಾರೆ. ಈ ದಿನ ಅಂದರೆ ದಿನಾಂಕಃ 04.03.2023 ರಂದು ನಡೆದ ಪಾಟೀ ಸವಾಲಿನ ಪ್ರಾರಂಭದಿಂದಲೂ ಸಾಕ್ಷಿಯವರು ಸರಿಯಾಗಿ ಉತ್ತರ ನೀಡದೇ ಎಲ್ಲಾ ಪ್ರಶ್ನೆಗಳಿಗೂ ನನಗೆ ನೆನಪಾಗುತ್ತಿಲ್ಲ, ಕಣ್ಣು ಸರಿಯಾಗಿ ಕಾಣುವುದಿಲ್ಲ ಮತ್ತು ಕಾಲಾವಕಾಶ ಬೇಕು ಎಂದು ಹೇಳಿರುವುದನ್ನು ನ್ಯಾಯಾಲಯ ಗಮನಿಸಿರುತ್ತದೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**